ಇವರ ಮಗಳಿರಬಹುದೆ? ಹೌದಲ್ವಾ ಅನಿಸಿ ಅತ್ತ ಬಂದರು. ಗುಡಿಸಲೊಳಗೆ ಹೆಂಡತಿ ಇರುಳ ಗಂಜಿಗೆ ಅಣಿಯಾಗುತ್ತ ಒಲೆಗೆ ಬೆಂಕಿ ಒಟ್ಟುತ್ತಿದ್ದಳು. ಗಂಡ ಹೊರಗೆ ಸೌದೆ ಸೀಳಿಕೊಡುತ್ತಿದ್ದ.

ಶ್ರೀರಾಮೇಗೌಡರು ಕೊಂಚ ನಿಂತು ಅನುಮಾನಿಸಿದರು. ಮತ್ತೆ ನಿಚ್ಚಯ ಮಾಡಿದವರಂತೆ 'ಅಯ್ಯಾ' ಅಂದರು. ಸೌದೆ ಕಡ್ಡಿ ಒಟ್ಟು ಮಾಡುತ್ತಿದ್ದ ಅವನು ಎದ್ದು ಸರಸರ ಬಂದ. ಶ್ರೀರಾಮೇಗೌಡರು ಅವನ ಉತ್ಸಾಹದ ಪ್ರತಿಕ್ರಿಯೆ ಕಂಡು ಏನು ಕೇಳಬೇಕೆಂದು ಗೊಂದಲ ಮೂಡಿ ಹಿಂದು ಮುಂದು ನೋಡಿದರು. ಕಾವಲುಗಾರನೇ ಇನ್ನಷ್ಟು ಮುಂದೆ ಬಂದು 'ಏನುಸ್ವಾಮಿ, ಏನು ಬೇಕಿತ್ತು' ಅಂದ. ಅವನ ನಡೆ ನುಡಿಯಲ್ಲಿರುವ ಈ ವಿಶ್ವಾಸ, ಈ ದಿಟ್ಟ ವರ್ತನೆ ತಮಗ್ಯಾಕೆ ಇಲ್ಲವಾಗುತ್ತಿದೆ? ಆ ಹಿಂಜರಿಕೆಯಿಂದಲೇ ಕೇಳಿದರು: 'ಇಲ್ಲಿ ಒಂದು ಹುಡುಗಿ ನಾಯಿ ಜೊತೆ ಓಡಾಡುತ್ತಿತ್ತಲ್ಲ. ಅದು ಕಾಣ್ತಿಲ್ಲ. ಅದ್ಕೆ...' ಅರ್ಧಕ್ಕೆ ನಿಲ್ಲಿಸಿದರು. ಕಾವಲುಗಾರ ಎಲ್ಲವನ್ನೂ ತಾನು ಗಮನಿಸಿದವನಂತೆ 'ಅದು ನಮ್ಮ ಮಗಳಲ್ಲಪ್ಪ. ಒಂದು ವಾರದಿಂದ ಬಂದಂಗಿಲ್ಲ. ನಿಮಗೇನಾದ್ರು ಮನೆಗೆಲ್ಸಕ್ಕೆ ಹುಡ್ಗಿ ಬೇಕಿತ್ತಾ? ನನ್ನಣ್ಣನ ಮಗಳೇ ಇದ್ದಾಳೆ. ಈ ಹುಡ್ಗಿಯಷ್ಟೇ ಬಲು ಚೂಟಿ. ನೀವು ಹೂ ಅಂದ್ರೆ ಊರಿಂದ ಕರಿಸ್ತೀನಿ, ಹೇಳಿ...'

ಶ್ರೀರಾಮೇಗೌಡರಿಗೆ ಇದೇಕೊ ಸರಿಕಾಣಲಿಲ್ಲ. ಈ ಕಾವಲುಗಾರನ ಬೇಡಿಕೆ ತನ್ನ ಭಾವನೆಗೆ ತಕ್ಕುದಲ್ಲ. ಅದು ವ್ಯಾಪಾರ ಅಂತನಿಸಿ 'ಏನೂ ಬೇಡ ಬಿಡಪ್ಪ' ಅಂದವರೇ ಮುಂದೆ ಹೋದರು. ಅವರಲ್ಲಿ ಅಸ್ವಸ್ಥತೆ, ವಿಷಣ್ಣತೆ ತುಂಬಿಕೊಂಡಿದ್ದರೂ ಹುಡುಗಿ ಸಿಗಬಹುದೆಂಬ ನಿರೀಕ್ಷೆ-ಪರಿಣಾಮ ಕಡು ಅಸ್ಪಷ್ಟವಾಗಿದ್ದರೂ – ಪೂರ್ಣವಾಗಿ ಕ್ಷೀಣಿಸಿರಲಿಲ್ಲ. ತಮ್ಮ ಅಪಾರ್ಟ್‌ಮೆಂಟಿನ ಎದುರು ರಸ್ತೆಯಲ್ಲಿರುವ ಮೂರ್ನಾಕು ಬಂಗಲೆಗಳಲ್ಲಿ ನಾಯಿ ಸಾಕಿರುವುದು ತಿಳಿದಿತ್ತು. ನಾಯಿ ಸಾಕಿದವರು ಮುಂಜಾನೆ, ಸಂಜೆ ನಾಯಿಗಳನ್ನು ಕರೆತಂದು ಕಾಲಾಡಿಸಿ, ರಸ್ತೆ ಬದಿಯಲ್ಲಿ ಮೂತ್ರ ಮಾಡಿಸಿ ಹೋಗುತ್ತಿದ್ದದ್ದನ್ನು ನೋಡಿದ್ದರು. ಅದ ಕಂಡು ಎಷ್ಟೋ ಸಲ ಸಿಡಿಮಿಡಿಗೊಂಡಿದ್ದರು. ಆ ಬಂಗಲೆಗಳ ಪೈಕಿ ಒಂದು ಮನೆಯ ನಾಯಿಯನ್ನು ಈ ಹುಡುಗಿ ಸುತ್ತಾಡಿಸುತ್ತಿದ್ದಿರಬಹುದು. ಒಮ್ಮೆ ಯಾಕೆ ನೋಡಬಾರದು ಅನಿಸಿ ಅತ್ತಲೇ ಮನಸ್ಸು ತುಡಿಯಿತು. ಅಂತೆಯೇ ಶ್ರೀರಾಮೇಗೌಡರು ಅವಿತು ಕೂತ ಅಜ್ಜಿಯನ್ನು ಹುಡುಕಲು ಕಳ್ಳ ಹೆಜ್ಜೆ ಇಡುತ್ತಾ ನಡೆಯುವ ಮಗುವಿನಂತೆ ಮನೆಮನೆ ಬಾಗಿಲು ಕಡೆ ನೋಡುತ್ತ ಆ ರಸ್ತೆಗುಂಟ ನಡೆಯತೊಡಗಿದರು. ನಗರದಲ್ಲಿ ಮುಂಬಾಗಿಲು ತೆರೆದುಕೊಂಡಿರಲು ಇದೇನು ತಮ್ಮೂರ ಹಳ್ಳಿ ಮನೆಗಳೇ? ಉಹುಂ. ಸುಳಿವು ಸಿಗಲಿಲ್ಲ. ಹೊಸಬರನ್ನು ಕಂಡರೆ ಬೊಗಳುವುದು ಹೋಗಲಿ, ಕನಿಷ್ಠಪಕ್ಷ ಗದರಿಸಲು ಈ ಬಂಗಲೆಗಳ ನಾಯಿಗಳೇನು ಬಾಗಿಲ ಬಳಿಯೇ ಕಾದು ಕೂರುವ ನಮ್ಮೂರ ಬೀದಿನಾಯಿಗಳೇ? ಉಹುಂ. ಸುಳಿವು ಸಿಗಲಿಲ್ಲ. ಈ ನಾಯಿಗಳೇನಿದ್ದರೂ ತನ್ನ ಒಡೆಯನ ಅಥವಾ ಒಡತಿಯ ಕಾಲ ಬಳಿಯೋ ಅಥವಾ ಸೋಫಾದ ಮೇಲೆಯೋ ಅಥವಾ ಹಾಸಿಗೆ ಬಳಿಯೋ ಪವಡಿಸಿರಬೇಕು!

ಶ್ರೀರಾಮೇಗೌಡರು ಯಾವುದೋ ಸೆಳೆತಕ್ಕೆ ವಶವಾದವರಂತೆ ರಸ್ತೆಯ ಕೊನೆ ಅಂಚಿನವರೆಗೂ ನಡೆದರು. ಅವರ ನಿರೀಕ್ಷೆಗೆ ಫಲ ಸಿಗಲಿಲ್ಲ. ಆ ಹುಡುಗಿ ಈ ರಸ್ತೆ ಬದಿಯ ಮನೆಯಲ್ಲೇ ಇರಬಹುದು ಎಂಬುದಕ್ಕೆ ಏನು ಗ್ಯಾರಂಟಿ? ಕಸಿವಿಸಿಯಾಯಿತು. ಹಿಂದಿರುಗಿದರು. ಅಷ್ಟರಲ್ಲಿ ಆ ಕಡೆಯಿಂದ ತಮ್ಮ ಅಪಾರ್ಟ್‌ಮೆಂಟಿನ ಶಿವಶಂಕರಪ್ಪ ಪಕ್ಕದಲ್ಲಿ ಬಂದು ಬೈಕು ನಿಲ್ಲಿಸಿ 'ಯಾಕೆ ಸರ್, ಏನೋ ಹುಡುಕ್ತಾ ಇದ್ದಂಗೆ ಕಾಣ್ತಿದೆ. ಯಾಕೆ ಹುಷಾರಿಲ್ಲವಾ? ಡಲ್ಲಾಗಿದ್ದೀರಿ? ಪಕ್ಕದ ರಸ್ತೆಯಲ್ಲಿ ಅಲ್ವಾ ಕ್ಲಿನಿಕ್ ಇರೋದು. ಬನ್ನಿ, ಕೂರಿ, ಕರಕೊಂಡು ಹೋಗ್ತೀನಿ' ಅಂದರು. ಶ್ರೀರಾಮೇಗೌಡರಿಗೆ ಇದೊಂದು ರೀತಿ ಛೇಡಿಕೆಯಂತೆ ಕಂಡಿತು. ಕಿರಿಕಿರಿ ಮತ್ತು ಅಸಹನೆಯಿಂದ ಗಂಟಲು ಒಣಗಿ ಬಂದಂತಾಗಿ ಸಾವರಿಸಿಕೊಂಡು 'ಏನಿಲ್ಲ ಇವ್ರೆ... ವಾಕಿಂಗ್ ಮಾಡ್ತಾ ಈಕಡೆಯಿಂದ ಬಂದೆ. ನೀವು ನಡೀರಿ, ನಾನು ಬರ್ತೀನಿ' ಅಂದರು.

ಒಂದು ಕ್ಷಣ ಶ್ರೀರಾಮೇಗೌಡರಿಗೆ ಕತ್ತಲೆಯಲ್ಲಿ ಕೂತು ಬೆಳಕಿಗೆ ಪರದಾಡುತ್ತಿರುವಂತೆ ಅನಿಸಿತು. ತವಕ, ತಲ್ಲಣಗಳ ಫಲವೇ? ಅವರೊಳಗೆ ಎಲ್ಲವೂ ಅಸ್ಪಷ್ಟತೆಯ ತಾಕಲಾಟಗಳು! ನಿರಾಶೆ-ವಿಷಾದಗಳ ಜಂಜಾಟಗಳು!! ಯಾರಿಗೆ ಹೇಳಿಕೊಳ್ಳುವುದು? ದಿನಾಲೂ ಸಹಜವಾಗಿಯೇ ಸಿಗುತ್ತಿದ್ದ ನೆರೆಯ